Sri D. DEVARAJA URS.—Were not all these matters considered when the estimate for the project was prepared?

Sri Kadidal MANJAPPA.—Not complete.

Sri D. DEVARAJA URS.—When was the estimate got up?

Sri Kadidal MANJAPPA.—We thought that the estimate was perfect.

Sri D. DEVARAJA URS.—When was the estimate prepared?

Sri Kadidal MANJAPPA.—I cannot give you the date.

Sri M. LINGANNA (Nanjangud).—May I know the policy in regard to such projects when estimates are prepared and sanctioned and the projects are not taken up?

Sri Kadidal MANJAPPA.—The policy is to execute the projects.

Sri M. LINGANNA.—Estimates are being sanctioned but still the projects are not being executed. May I know the policy underlying the particular act of the Government?

Sri Kadidal MANJAPPA.—There is no policy. It depends upon.....

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಹೀಗೆ ನಿಧಾನಮಾಡಿದರೆ ಬಡ್‌ಜೆಟ್ಟಿನಲ್ಲಿ ಕೊಟ್ಟ ಹಣ ಖರ್ಚಾಗದೆ ಉಳಿದುಹೋಗುವುದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹೆಚ್ಚು ಹಣ ಅನಾವಶ್ಯಕವಾಗಿ ಖರ್ಚಾಗಕೂಡದು ಎಂದು ಪುನಃ ವಿಮರ್ಶೆ ಮಾಡುತ್ತಿದ್ದೇವೆ.

ಶ್ರೀ ಕೆ. ಪುಟ್ಟಸ್ವಾಮಿ.—ಹಾಗಾದರೆ ಬಡ್‌ಜೆಟ್ಟಿನಲ್ಲಿ ಯಾವ ಯಾವ ಬಾಬುಗಳು ಪೂರ್ತಿಯಾಗಿ ವಿಮರ್ಶೆಯಾಗಿದ್ದವೋ, ಅಂಥವುಗಳನ್ನೇ ಏಕೆ ಸೇರಿಸಕೂಡದಾಗಿತ್ತು?

ಶ್ರೀ ಕಡಿದಾಳ್ ಮಂಜಪ್ಪ.—ಆಗ ಪೂರ್ತಿ ವಿಮರ್ಶೆಯೇ ಆಗಿತ್ತು. ಆದರೆ ತರುವಾಯ ಭಿನ್ನಾಭಿಪ್ರಾಯ ಬಂತು. ಆದ್ದರಿಂದ ಪುನರ್ವಿಮರ್ಶೆ ಮಾಡುತ್ತಿದ್ದೇವೆ.

ಶ್ರೀ ಕೆ. ಪುಟ್ಟಸ್ವಾಮಿ.—ಈ ರೀತಿಯಾಗಿ ನಡೆದರೆ, ಸಿಬ್ಬಂದಿಯವರಿಗೆ ತಗಲುವ ಖರ್ಚೆಲ್ಲಾ ವೃಥಾ ಖರ್ಚಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಪೂರ್ತಿ ವಿಮರ್ಶೆ ಮಾಡಿಯೇ ಪ್ರಾರಂಭ ಮಾಡಿದ್ದೇವೆ. ಹೆಚ್ಚು ಹಣ ಅನಾವಶ್ಯಕವಾಗಿ ಖರ್ಚಾಗುತ್ತದೆಂದು ಸರ್ಕಾರದವರು ಅಭಿಪ್ರಾಯಕ್ಕೆ ಬಂದಿದ್ದರಿಂದ ಪುನಃ ವಿಮರ್ಶೆಗೆ ಕೊಡಲಾಯಿತು.

ಶ್ರೀ ಕೆ. ಪುಟ್ಟಸ್ವಾಮಿ.—ಪೂರ್ತಿ ವಿಮರ್ಶೆ ಮಾಡದೆ ಸರ್ಕಾರಕ್ಕೆ ಇಲಾಖೆಯವರು ಮಂಜೂರಾತಿಗೆ ಕೊಡುವುದಕ್ಕೆ ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ಆಗ ಸರಿಯಾಗಿದೆಯೆಂದು ತಿಳಿದಿದ್ದರು.

Lift Irrigation in Malvalli Taluk.

Q.—225. **B. P. NAGARAJA MURTHY** (Malavalli).—

Will the Government be pleased to state:—

(*a*) the number of lift irrigations sanctioned in Malavalli Taluk;

(*b*) the number of them that are completed and the number that are under progress;

(*c*) the number that are stayed;

(*d*) the reason for staying them;

A.—**Sri Kadidal MANJAPPA** (Minister for Revenue and Public Works).

(*a*) One.

(*b*) Nil.

(*c*) One.

(*d*) The utility of the lift irrigation scheme to a large number of raiyats is being examined.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಇದು ಸ್ಯಾಂಕ್ಷನ್ ಆದದ್ದು ಯಾವಾಗ?

ಶ್ರೀ ಕಡಿದಾಳ್ ಮಂಜಪ್ಪ.—ತಾರೀಖು 13-12-51ರಲ್ಲಿ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಸ್ಯಾಂಕ್ಷನ್ ಆಗಿ ಎಷ್ಟು ದಿನಸಗಳಾದ ಮೇಲೆ stay ಮಾಡಿದರು?

Sri Kadidal MANJAPPA.—During this year.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಯಾವ ತಾರೀಖಿನಲ್ಲಿ stay ಮಾಡಿದರು?

ಶ್ರೀ ಕಡಿದಾಳ್ ಮಂಜಪ್ಪ.—ತಾರೀಖು 29-7-1952ರಲ್ಲಿ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—Stay ಮಾಡಿದ್ದು ಯಾವ ಆಧಾರದಮೇಲೆ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಮದರಾಸ್ ಗೌರ್ನ್‌ಮೆಂಟಿನ ಮಿಸೆಸ್ ಚಟರ್ಜಿ ಎಂಬುವರಿಗೆ ಮಾತ್ರ ಪ್ರಯೋಜನವಾಗುವುದಾಗಿದೆಯೆಂದೂ ಮತ್ತು ಸರ್ಕಾರದವರಿಗೆ ಹೆಚ್ಚಾಗಿ ಖರ್ಚಾಗುತ್ತಿದೆ ಎಂದೂ ಹೇಳಿ ಪುನರ್ ವಿಮರ್ಶೆ ನಾಡಬೇಕೆಂದು ಸರ್ಕಾರದವರಿಗೆ ದೂರು ಬಂದದ್ದರ ಮೇಲೆ ಇದನ್ನು stay ಮಾಡಿದ್ದೇವೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ದೂರು ಸುಳ್ಳು ಅಥವಾ ನಿಜ ಎಂಬುದನ್ನು ವಿಮರ್ಶೆ ಮಾಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡುತ್ತಿದ್ದೇವೆ. ರಿಪೋರ್ಟನ್ನು ಕೇಳಿದ್ದೇವೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಸರ್ಕಾರದವರು ಇದನ್ನು ಸ್ಯಾಂಕ್ಷನ್ ಮಾಡಿದಾಗಲೇ ಪರ್ಯಾಲೋಚನೆ ಮಾಡಬೇಕಾಗಿತ್ತಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡಿತ್ತೋ ಇಲ್ಲವೋ, ನೋಟೀಸ್ ಬೇಕು.

ಆದರೆ ಇನ್ನೊಂದು ವಿಷಯ ಈ ಸಂದರ್ಭದಲ್ಲಿ ಹೇಳುತ್ತೇನೆ. The proposed area to be irrigated is 411 acres and the cost comes to nearly two lakhs of rupees.

Water Supply to Lands under Visvesvaraya Canal in Malavalli Taluk.

Q.—227. Sri B. P. NAGARAJA MURTHY (Malavalli).—

Will the Government be pleased to state :—

(*a*) the extent of land under Visvesvaraya Canal in Malavalli Taluk that was not supplied with water;

(*b*) whether it was not possible to supply water to that area at least to the semi-dry crops by reducing the paddy area;

(*c*) whether they have taken any steps to give any relief to the atchkatdars of that area?

A.— Sri Kadidal MANJAPPA (Minister for Revenue and Public Works).—

(*a*) 4,400 acres.

(*b*) No.

(*c*) The question of giving relief is not brought up for consideration.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಈ 4,400 ಎಕರೆ ಜೊತೆಗೆ ಇನ್ನೂ 5,000 ಎಕರೆಗಳಿಗೆ ನೀರು ತಲಪಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಆ ಪ್ರದೇಶಕ್ಕೆ ತಾವೇ ಸೆಪ್ಟಂಬರ್ ಮಾಹೆಯಲ್ಲಿ ಬಂದು ಖುದ್ದು ಅಜಮಾಯಿಷಿ ಮಾಡಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡಿದ್ದೇವೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಅಲ್ಲಿ ಭತ್ತ ಬೆಳೆಯುವ ಪ್ರದೇಶವನ್ನು ಕಡಮೆ ಮಾಡಿ semi-dry ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಿರಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ರೈತರು ಮೊದಲೇ ಯೋಚನೆಮಾಡಿದ್ದರೆ ಚೆನ್ನಾಗಿತ್ತು.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಪರಿಹಾರ ಕೊಡುವವರು ತಾವೇ ಖುದ್ದು ನೋಡಿರುವುದರಿಂದ ಬೇರೆ ಯಾರಿಂದಲೂ ಅರ್ಜಿ ಬರಬೇಕಾಗಿಲ್ಲ ಅಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಹಾರ ಯಾವುದೂ ಕೊಟ್ಟಿಲ್ಲ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಬೇರೆ ಕ್ಷಾಮ ಪ್ರದೇಶಗಳಿಗೆ ಯಾವ ಪರಿಹಾರ ಕೊಡಬೇಕೋ ಅದನ್ನು ಇಲ್ಲಿಯೂ ಕೊಡಬೇಕಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಕ್ಷಾಮ ಪರಿಸ್ಥಿತಿ ಇದ್ದರೆ ಕ್ಷಾಮ ಪರಿಹಾರ ಕೊಡುತ್ತೇವೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಅಲ್ಲಿ ಮಳೆ ಬಾರದೆ ನಾಲೆಯಲ್ಲಿ ನೀರು ಇಲ್ಲದಿದ್ದ ಮೇಲೆ ಅದು ಕ್ಷಾಮ ಪ್ರದೇಶ ಅಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಬೇರೆ dry crop ಬೆಳೆದಿರಬಹುದು.

ಶ್ರೀ ಹೆಚ್. ಕೆ. ವೀರಣ್ಣಗೌಡ (ಮದ್ದೂರು).—ವಿಶ್ವೇಶ್ವರಯ್ಯ ನಾಲೆಯ ಕೊನೆಯ ಪ್ರದೇಶಗಳಾದ ಮಳವಳ್ಳಿ ಮತ್ತು ಶಿಂಷಾ ಪ್ರದೇಶಗಳ ರೈತರಿಗೆ ಕಂದಾಯದ